**ಓ.ಎಸ್. ನಂ. 135/2016** **ಪಿ.ಡಬ್ಲ್ಯೂ-1**

**ಸಾಕ್ಷಿಯನ್ನು ದಿನಾಂಕ 19.4.2024 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

ಮುಂದುವರೆದ ಪಾಟೀ ಸವಾಲುಃ 12 ನೇ ಪ್ರತಿವಾದಿ ಪರ ಶ್ರೀ ಕೆ.ಎಸ್.ಎಲ್ ವಕೀಲರಿಂದಃ

ನಿಪಿ22 ರ ಎರಡನೇ ಪುಟದಲ್ಲಿ 1988-89 ಮತ್ತು 1989-90 ನೇ ಸಾಲಿನ ವ್ಯವಸಾಯಗಾರರ ಕಲಂನಲ್ಲಿ ಬಿಲಾಲ್ ಬಿನ್ ದಸ್ತಗಿರ್ ರವರ ಹೆಸರು ನಮೂದಾಗಿರುತ್ತದೆ ಎಂದರೆ ಸರಿ. 2016 ನೇ ಸಾಲಿನಲ್ಲಿ 2 ನೇ ಪ್ರತಿವಾದಿಯು ಚಾಮಲಾಪುರದ ರಸ್ತೆಯಲ್ಲಿ ಸಿಕ್ಕಿದಾಗ ಅವರು ಎಲ್ಲಿಗೆ ಹೋಗುತ್ತಿದ್ದಾರೆ ಎಂದು ನಾನು ಅವರನ್ನು ಕೇಳಿರುವುದಿಲ್ಲ. 2016 ರಲ್ಲಿ ನಾನು ದಾವಆಸ್ತಿಯನ್ನು ನೋಡಿಕೊಂಡು ವಾಪಸ್ ಬರುವಾಗ 2 ನೇ ಪ್ರತಿವಾದಿಯು ನನಗೆ ಸಿಕ್ಕಿರುತ್ತಾರೆ. 2016 ರಲ್ಲಿ ನಾನು ದಾವ ಜಮೀನುಗಳನ್ನು ನೋಡಿದಾಗ ಅದರಲ್ಲಿ ಬೋರ್ವೆಲ್ಲನ್ನು ಕೊರೆಸಿದ್ದರು. ನಾನು ಸದರಿ ಬೋರ್ವೆಲ್ಲನ್ನು ಯಾರು ಕೊರೆಸಿರುತ್ತಾರೆ ಮತ್ತು ಪಂಪ್‌ಸೆಟ್ಟನ್ನು ಹಾಕಿಸಿರುತ್ತಾರೆ ಎಂದು ಕೇಳಿರುವುದಿಲ್ಲ. 2005 ರ ನಂತರ ನನ್ನ ತಂದೆ ಅವರು ತೀರಿಕೊಳ್ಳುವವರೆಗೂ ದಾವ ಜಮೀನುಗಳಿಗೆ ಹೋಗಿರುವುದಿಲ್ಲ. 2005 ರಲ್ಲಿ ನನ್ನ ತಂದೆಗೆ ತೀವ್ರ ಅನಾರೋಗ್ಯ ಇತ್ತು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಲು ತೊಂದರೆ ಇರುತ್ತದಾ ಎಂದರೆ ಸಾಕ್ಷಿದಾರರು ಅದು ಈಗ ಸಿಗುತ್ತದೋ ಇಲ್ಲವೋ ಗೊತ್ತಿರುವುದಿಲ್ಲ ಎನ್ನುವರು. 2005 ರಿಂದ 2012 ರವರೆಗೆ ನನ್ನ ತಂದೆಗೆ ದಾವಆಸ್ತಿಗಳಿಗೆ ಹೋಗದಿರುವಷ್ಟು ತೀವ್ರ ಅನಾರೋಗ್ಯ ಇತ್ತು ಎಂದು ಈ ಕೇಸಿಗೋಸ್ಕರ ಸೃಷ್ಟಿ ಮಾಡಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2005 ರಿಂದ 2012 ರವರೆಗೆ ನನ್ನ ತಂದೆಯನ್ನು ನೋಡಲು 2 ನೇ ಪ್ರತಿವಾದಿಯು ನಮ್ಮ ಮನೆಗೆ ಬಂದಿರುತ್ತಾರೋ ಇಲ್ಲವೋ ನನಗೆ ಗೊತ್ತಿರುವುದಿಲ್ಲ. ನನ್ನ ತಂದೆ ಅವರಿಗೆ 15-16 ವಯಸ್ಸಾಗಿದ್ದಾಗ ವ್ಯಾಪಾರ ಮಾಡಲು ಪ್ರಾರಂಭಿಸಿದ್ದು, ಅವರಿಗೆ ಅನಾರೋಗ್ಯವಾದಾಗ ನನ್ನ ತಮ್ಮ 2000 ರಿಂದ ವ್ಯಾಪಾರವನ್ನು ಮುಂದುವರೆಸಿದ್ದು, ನಾನು 2002-03 ರಿಂದ ವ್ಯಾಪಾರವನ್ನು ಮಂದುವರೆಸಿರುತ್ತೇನೆ. ಈಗಲೂ ಸಹ ನಾನು ಈರುಳ್ಳಿ ಆಲೂಗೆಡ್ಡೆ ವ್ಯಾಪಾರವನ್ನು ಮಾಡುತ್ತಿದ್ದೇನೆ. 2002 ನೇ ಸಾಲಿನಲ್ಲಿ ನನ್ನ ತಂದೆಗೆ ವ್ಯಾಪಾರದ ಲೈಸೆನ್ಸ ರದ್ದಾಗಿರುತ್ತದೆ. ನನ್ನ ತಂದೆಗೆ 2005 ರಲ್ಲಿ ಅನಾರೋಗ್ಯವಾಗಿರುತ್ತದೆ. ನನ್ನ ತಂದೆ ಅವರು ತೀರಿಕೊಳ್ಳುವವರೆಗೆ ಅವರ ಹೆಸರಿನಲ್ಲಿ ಪ್ರತ್ಯೇಕವಾಗಿ ಲೈಸೆನ್ಸ ಹೊಂದಿ ವ್ಯವಹಾರ ಮಾಡುತ್ತಿದ್ದರು, ನಾನು ಮತ್ತು ನನ್ನ ತಮ್ಮ ಪ್ರತ್ಯೇಕವಾಗಿ ಲೈಸೆನ್ಸ ಹೊಂದಿ ವ್ಯಾಪಾರ ಮಾಡುತ್ತಿದ್ದೆವು ಎಂದರೆ ಸಾಕ್ಷಿದಾರರು ನಾನು ಮತ್ತು ನನ್ನ ತಮ್ಮ ಪ್ರತ್ಯೇಕವಾಗಿ ಲೈಸೆನ್ಸ ಹೊಂದಿ ವ್ಯಾಪಾರ ಮಾಡುತ್ತಿದ್ದೆವು, ನನ್ನ ತಂದೆಯವರ ಲೈಸೆನ್ಸ 2002 ರಲ್ಲಿ ರದ್ದಾಗಿದ್ದು ಅದರ ನಂತರ ಅವರು ವ್ಯಾಪಾರ ಮಾಡುತ್ತಿರಲಿಲ್ಲ ಎನ್ನುವರು. ನನ್ನ ತಂದೆಗೆ ಸಂಬಂಧಿಸಿದ ಲೈಸೆನ್ಸ ರದ್ದಾಗಿರುವ ಬಗ್ಗೆ ನನ್ನ ಬಳಿ ಈಗ ದಾಖಲೆ ಇರುವುದಿಲ್ಲ. ನಿಜವಾಗಿ ಲೈಸೆನ್ಸ ರದ್ದಾಗಿದ್ದಲ್ಲಿ ನಾನು ಮತ್ತು ನನ್ನ ತಂದೆ ಒಂದೇ ಎ.ಪಿ.ಎಂ.ಸಿ ಯಲ್ಲಿ ವ್ಯಾಪಾರ ಮಾಡುತ್ತಿದ್ದರಿಂದ ಸದರಿ ರದ್ದಾಗಿದೆ ಎಂದು ಹೇಳುವ ಲೈಸೆನ್ಸನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತಿದ್ದೆ ಎಂದರೆ ಸರಿಯಲ್ಲ.

ನಾನು 2016 ರಲ್ಲಿ ದಾವಆಸ್ತಿಯಲ್ಲಿರುವ ಬೋರ್ವೆಲ್ ಮತ್ತು ಪಂಪ್‌ಸೆಟ್ಟನ್ನು ನೋಡಿ ವಾಪಸ್ ಬಂದಾಗ 2 ನೇ ಪ್ರತಿವಾದಿ ಬಳಿ ಯಾರು ಬೋರ್ವೆಲ್ ಕೊರೆಸಿರುತ್ತಾರೆ ಮತ್ತು ಪಂಪ್‌ಸೆಟ್ಟನ್ನು ಹಾಕಿಸಿರುತ್ತಾರೆ ಎಂದು ವಿಚಾರಣೆ ಮಾಡಿರುವುದಿಲ್ಲ. 2 ನೇ ಪ್ರತಿವಾದಿಯು ನನಗೆ ಸಿಕ್ಕಿದಾಗ ಬೋರ್ವೆಲ್ ಮತ್ತು ಪಂಪ್‌ಸೆಟ್ ಹಾಕಿಸಿರುವ ಬಗ್ಗೆ ಅವರ ಮೇಲೆ ನನಗೆ ಕೋಪ ಬಂದಿರುತ್ತದೆ. ಬೋರ್ವೆಲ್ ಮತ್ತು ಪಂಪ್‌ಸೆಟ್ ಏಕೆ ಹಾಕಿಸಿರುತ್ತೀರಿ ಎಂದು ಕೇಳಬೇಕು ಎಂದು ಅನಿಸಿತ್ತು, ಆದರೆ ಸದರಿ ಸಮಯದಲ್ಲಿ ಏನು ಮಾಡಬೇಕು ಎಂದು ಗೊತ್ತಾಗದೇ ಕೇಳಿರುವುದಿಲ್ಲ. ಸದರಿ ದಿನ ನಾನು ಕಾರಿನಲ್ಲಿ ಹೋಗುತ್ತಿದ್ದು, 2 ನೇ ಪ್ರತಿವಾದಿಯು ನಡೆದುಕೊಂಡು ಬರುತ್ತಿದ್ದರು. ಅವರ ಜೊತೆ ನಾನು 5-10 ನಿಮಿಷ ಮಾತನಾಡಿರುತ್ತೇನೆ. ನಾನು ಅವರ ವಿಳಾಸವನ್ನು ಕೇಳಿರುವುದಿಲ್ಲ. ನಂತರ ನಾನು ಅವರನ್ನು ಭೇಟಿ ಮಾಡಲು ಪ್ರಯತ್ನಿಸಿದ್ದು ಅವರು ಸಿಕ್ಕಿರುವುದಿಲ್ಲ. ಅವರು ಸಿಗದಿರುವುದರಿಂದ ಅವರು ನನಗೆ ಮೋಸ ಮಾಡಿರುತ್ತಾರೆ ಎಂದು ನಾನು ಅವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿರುವುದಿಲ್ಲ. ನಾನು 2016 ರಲ್ಲಿ ದಾವಆಸ್ತಿಗಳ ಬಳಿ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯು ಚಾಮಲಾಪುರದ ನಿವಾಸಿ ಅಲ್ಲದಿರುವ ಕಾರಣ ಸದರಿ ದಿನ ನನಗೆ ಅವರು ಸಿಕ್ಕಿರುವುದಿಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯು ಮೊದಲಿನಿಂದಲೂ ಮೈಸೂರಿನಲ್ಲಿ ವಾಸವಾಗಿರುತ್ತಾರೆ ಎಂದರೆ ಸಾಕ್ಷಿದಾರರು ಅವರು ಎಲ್ಲಿ ವಾಸವಾಗಿರುತ್ತಾರೆ ಎಂದು ಗೊತ್ತಿರುವುದಿಲ್ಲ, ಆದರೆ ಚಾಮಲಾಪುರದಲ್ಲಿ ಸಿಕ್ಕಿರುತ್ತಾರೆ ಎನ್ನುವರು. 2 ನೇ ಪ್ರತಿವಾದಿಗೆ ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಸಹಿ ಮಾಡಲು ಗೊತ್ತಿತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. ಅವರು ವಿದ್ಯಾವಂತರಾಗಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ಅವರು ವಿದ್ಯಾವಂತರಾಗಿದ್ದರಿಂದ ಅವರು ದೆಹಲಿಯ ಮೆಟ್ರೊನಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸಾಕ್ಷಿದಾರರು ಅವರು ಎಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ಗೊತ್ತಿರುವುದಿಲ್ಲ, ಆದರೆ ನನ್ನ ತಂದೆಗೆ ಮಾಡಿಕೊಟ್ಟಿರುವ ಕ್ರಯಪತ್ರದಲ್ಲಿ ಹೆಬ್ಬೆಟ್ಟು ಗುರುತನ್ನು ಹಾಕಿರುತ್ತಾರೆ ಎನ್ನುವರು. ನಿಪಿ10 ರಲ್ಲಿ ಕಂಡು ಬರುವ ದಸ್ತಗಿರ್ ಸಾಬ್ ರವರ ಮಗ ಅಬ್ದುಲ್ಲ ದಾವಆಸ್ತಿಗಳ ನಿಜವಾದ ಮಾಲೀಕರು ಎಂದರೆ ಸಾಕ್ಷಿದಾರರು ಅದೇ ಅಬ್ದುಲ್ಲ ರವರು ನನ್ನ ತಂದೆಗೆ ನಿಪಿ8 ರಂತೆ ಕ್ರಯಪತ್ರ ಮಾಡಿಕೊಟ್ಟಿರುತ್ತಾರೆ ಎನ್ನುವರು. ನಿಪಿ8 ರಲ್ಲಿ ಕಂಡು ಬರುವ ಅಮೀನ ಮತ್ತು ಬಾನು ಎಂದು ಸಹಿ ಮಾಡಿರುವ ವ್ಯಕ್ತಿಗಳು ಮತ್ತು ಹೆಬ್ಬೆಟ್ಟು ಗುರುತು ಹಾಕಿರುವ ಬಿಲಾಲ್ ಮತ್ತು ಅಬ್ದುಲ್ಲ ರವರು ದಸ್ತಗಿರ್ ರವರ ವಂಶಸ್ಥರು ಅಲ್ಲ ಎಂದರೆ ಸರಿಯಲ್ಲ. ದಿನಾಂಕ 10.8.2000 ರಲ್ಲಿ ನೋಂದಣಿ ಕಛೇರಿಯಲ್ಲಿ ಕಂಪ್ಯೂಟರ್ ಬಂದಿರಲಿಲ್ಲ, ಕೈಬರವಣಿಗೆಯಲ್ಲಿ ನೋಂದಣಿಯಾಗುತ್ತಿತ್ತು ಎಂದರೆ ಸರಿ. ಸದರಿ ಸಮಯದಲ್ಲಿ ದಾಖಲಾತಿಗಳನ್ನು ಬರೆದುಕೊಡುವ ವ್ಯಕ್ತಿಗಳ ಭಾವಚಿತ್ರವನ್ನು ಪಡೆದುಕೊಳ್ಳುತ್ತಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ಕಂಪ್ಯೂಟರ್ ಇಲ್ಲದಿರುವುದನ್ನು ಮತ್ತು ಭಾವಚಿತ್ರವನ್ನು ಪಡೆದುಕೊಳ್ಳದಿರುವುದನ್ನು ನನ್ನ ತಂದೆಯು ದುರುಪಯೋಗಪಡಿಸಿಕೊಂಡು ದಸ್ತಗೀರ್ ರವರ ವಂಶಸ್ಥರಲ್ಲದ ಬಿಲಾಲ್, ಅಬ್ದುಲ್ಲ, ಅಮೀನಾ ಮತ್ತು ಬಾನು ಎಂಬ ಹೆಸರಿನ ವ್ಯಕ್ತಿಗಳನ್ನು ಕರೆದುಕೊಂಡು ಬಂದು ಅವರನ್ನೆ ದಸ್ತಗಿರ್ ವಂಶಸ್ಥರು ಎಂದು ಮತ್ತು ದಾವಆಸ್ತಿಗಳ ಮಾಲೀಕರು ಎಂದು ಬಿಂಬಿಸಿ ನಿಪಿ8 ನ್ನು ಸೃಷ್ಟಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ8 ಶುದ್ಧ ಕ್ರಯಪತ್ರ

ಆಗಿರುವುದಿಲ್ಲ, ಅದು ಸೃಷ್ಟಿತ ಕ್ರಯಪತ್ರ ಎಂದರೆ ಸರಿಯಲ್ಲ.  ನಿಜವಾಗಿ ಕ್ರಯಪತ್ರವಾಗಿದ್ದಲ್ಲಿ ದಸ್ತಗಿರ್ ರವರ ಇತರ ವಂಶಸ್ಥರನ್ನು ಕರೆದುಕೊಂಡು ಬಂದು ಕ್ರಯಪತ್ರ ಮಾಡಿಸಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿದಾರರು ಆಸ್ತಿಗೆ ಸಂಬಂಧಪಟ್ಟವರು ಬಂದು ನಿಪಿ8 ರಂತೆ ಕ್ರಯಪತ್ರ ಮಾಡಿಕೊಟ್ಟಿರುತ್ತಾರೆ ಎನ್ನುವರು.  ದಸ್ತಗಿರ್ ರವರ ಎಲ್ಲಾ ವಾರಸುದಾರರನ್ನು ಕರೆತಂದು ಕ್ರಯಪತ್ರ ಮಾಡಿಸಿಕೊಳ್ಳಲು ನಿಮ್ಮ ತಂದೆಗೆ ತೊಂದರೆ ಇತ್ತಾ ಎಂದರೆ ಸಾಕ್ಷಿದಾರರು ನನ್ನ ತಂದೆಗೆ ದಸ್ತಗಿರ್ ರವರಿಗೆ ಎಷ್ಟು ಜನ ವಾರಸುದಾರರು ಇರುತ್ತಾರೆ ಎಂದು ತಿಳಿದುಕೊಂಡಿದ್ದರೋ ಅಷ್ಟು ಜನರಿಂದ ಕ್ರಯಪತ್ರ ಮಾಡಿಸಿಕೊಂಡಿರುತ್ತಾರೆ ಎನ್ನುವರು.

ಈಗ ದಾವಆಸ್ತಿಗಳ ಪಹಣಿಗಳು 19 ಮತ್ತು 20 ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ ಎಂದರೆ ಸರಿ. 2000 ನೇ ಸಾಲಿನಿಂದ ಈ ದಾವೆ ಸಲ್ಲಿಸುವವರೆಗೆ ಮತ್ತು ದಾವೆ ಸಲ್ಲಿಸಿದ ನಂತರ ಸಹ ನಿಪಿ8 ಕ್ರಯಪತ್ರದ ಪ್ರಕಾರ ಪಹಣಿ ಮಾಡಿಸಿಕೊಳ್ಳಲು ಪ್ರಯತ್ನಿಸಿರುತ್ತೀರಾ ಎಂದರೆ ಸಾಕ್ಷಿದಾರರು ಅದಕ್ಕೆ ಅರ್ಜಿ ನೀಡಿದ್ದು ಭೂಸುಧಾರಣಾ ಕಾಯ್ದೆ ಕಲಂ 79(ಎ) ಮತ್ತು (ಬಿ) ಅಡಿ ಸಂಶಯ ಇರುತ್ತದೆ ಎಂದು ಮ್ಯುಟೇಶನ್ ಮತ್ತು ಇ.ಸಿ ಯಲ್ಲಿ ನಮೂದಾಗಿರುತ್ತದೆ ಎನ್ನುವರು.  2000-2001 ನೇ ಸಾಲಿನಲ್ಲಿ ಕಂದಾಯ ಇಲಾಖೆಯವರು 79(ಎ) ಮತ್ತು (ಬಿ) ಉಲ್ಲಂಘನೆಯಾಗಿರುತ್ತದೆ ಎಂದು ನಿಪಿ13 ರಂತೆ ಹಿಂಬರಹ ನೀಡಿರುತ್ತಾರೆ.  ಸದರಿ ಹಿಂಬರಹ ನೀಡಿ ದಾವೆ ಸಲ್ಲಿಸುವ ಸಮಯಕ್ಕೆ 15 ವರ್ಷವಾಗಿರುತ್ತದೆ ಎಂದರೆ ಸರಿ.  ನನ್ನ ತಂದೆ ತೀರಿಕೊಳ್ಳುವವರೆಗೆ ಸದರಿ ಹಿಂಬರಹವನ್ನು ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸಾಕ್ಷಿದಾರರು ಪ್ರಶ್ನೆ ಮಾಡಿರಬಹುದು, ನನಗೆ ಗೊತ್ತಿರುವುದಿಲ್ಲ ಎನ್ನುವರು.  ದಾವಪತ್ರದಲ್ಲಿ ನನ್ನ ತಂದೆ ನಿಪಿ13 ಹಿಂಬರಹವನ್ನು ಪ್ರಶ್ನೆ ಮಾಡಿರುತ್ತಾರೆ ಎಂದು ಹೇಳಿರುತ್ತೇನೆ. ದಾವಪತ್ರದಲ್ಲಿರುವ ವಿಚಾರಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.  ನಿಪಿ13 ಹಿಂಬರಹವನ್ನು ಪ್ರಶ್ನೆ ಮಾಡದಿದ್ದರೂ ಸಹ ಪ್ರಶ್ನೆ ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ನ್ಯಾಯಾಲಯದ ಸಮಯ ಮುಗಿದಿದ್ದರಿಂದ ಮುಂದುವರೆದ ಪಾಟೀ ಸವಾಲಿಗೆ ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.